

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಪ್ರವಾಸಿಗರ ಕಲರವ ನಿಧಾನಕ್ಕೆ ಹೆಚ್ಚುತ್ತಿದೆ.


ಹೋಲಿಸಿದರೆ ಪರವಾಗಿಲ್ಲ ಎನ್ನಬಹುದಷ್ಟೇ. ಚಾಮುಂಡೇಶ್ವರಿ ತಾಯಿ ದರ್ಶನ ಪಡೆಯಲು ನಿತ್ಯ ಭಕ್ತರು ಬಂದು ಹೋಗುತ್ತಿದ್ದಾರೆ. ಪರಿಸ್ಥಿತಿ ಮೊದಲಿನ ಸ್ಥಿತಿಗೆ ಬರಲಿ ಎಂದು ಪ್ರವಾಸಿಗರಷ್ಟೇ ಅಲ್ಲ, ಇಡೀ ಮೈಸೂರೇ ಆಸೆಗಣ್ಣಿನಿಂದ ಕಾಯುತ್ತಿರುವಂತಿದೆ.

## ಕೊಡಗಿಗೆ ಭೂಕುಸಿತದ ಬಡಿತ

ರಾಜ್ಯದ ಬೇರೆಲ್ಲ ಪ್ರವಾಸಿ ತಾಣಗಳು ಕೊರೊನಾ ಬರೆಯಿಂದ ತತ್ತರಿಸಿದರೆ ಕೊಡಗಿನ ಕಥೆಯೇ ಬೇರೆ. ಕಳೆದ ವರ್ಷವೇ ಕೊಡಗು ಪ್ರಕೃತಿವಿಕೋಪದಿಂದ ಪತರಗುಟ್ಟಿತ್ತು. ಈ ವರ್ಷ ಒಂದೆಡೆ ಕೊರೊನಾ ದರಿ, ಇನ್ನೊಂದೆಡೆ ಭೂಕುಸಿತದ ಹುಲಿ. ನಡುವೆ ಸಿಲುಕಿದ ಕೊಡವರ ನಾಡು ಅಕ್ಷರಶಃ ಬಡವಾಗಿದೆ.

ಕೊಡಗಿನಲ್ಲಿ ಅಂದಾಜು ನಾಲ್ಕು ಸಾವಿರ ಹೋಮ್‌ಸ್ಟೇಗಳಿವೆ. ಅದರಲ್ಲಿ ಮೂರು ಸಾವಿರ ಅನಧಿಕೃತ ಹೋಮ್‌ಸ್ಟೇಗಳು. ಈ ಸಂಖ್ಯೆಯಿಂದ, ಅಲ್ಲಿನ ಜನರು ಪ್ರವಾಸೋದ್ಯಮವನ್ನು ಎಷ್ಟು ನೆಚ್ಚಿಕೊಂಡಿದ್ದಾರೆ ಎಂದು ಅರ್ಥ ಮಾಡಿಕೊಳ್ಳಬಹುದು. ನಿಸರ್ಗ ದೇವತೆ ಪುರಸೊತ್ತಲ್ಲಿ ಸೃಷ್ಟಿಸಿದಂತೆ ಭಾಸವಾಗುವ ಇಲ್ಲಿನ ಹಲವು ರಮಣೀಯ ತಾಣಗಳು ಈಗ ನಿರ್ಜನವಾಗಿವೆ. ಸೆ. 1ರವರೆಗೂ ಇಲ್ಲಿನ ರಾಜಾಸೀಟ್ ಬಿಟ್ಟು ಉಳಿದ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರಿಗೆ ಪ್ರವೇಶ ಇರಲಿಲ್ಲ. ಹೊಸ ಪ್ರವಾಸೋದ್ಯಮ ನೀತಿ ಜಾರಿಗೆ ಬಂದ ಮೇಲೆ ಪ್ರವಾಸಿ ಚಟುವಟಿಕೆಗಳು, ನಿಧಾನವಾಗಿ ಗರಿಗೆದರುವ ಲಕ್ಷಣಗಳು ಕಾಣಿಸುತ್ತಿವೆ. ಒಂದೊಂದೇ ಪ್ರವಾಸಿ ತಾಣಗಳು ಪ್ರವೇಶಕ್ಕೆ ಮುಕ್ತವಾಗುತ್ತಿವೆ. ಕೋವಿಡ್ ಕರಿನೆರಳು ಇನ್ನೂ ಕಾಡುತ್ತಿದ್ದು ಅದರ ನಡುವೆಯೇ ಜೀವಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ.

ಎರಡು ವಾರಗಳ ಹಿಂದೆ ಮಡಿಕೇರಿಯ ರಾಜಾಸೀಟ್ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಬಳಿಕ ನಿಧಾನಕ್ಕೆ ಪ್ರವಾಸಿಗರು ‘ಮಂಜಿನ ನಗರಿ’ಯತ್ತ ಆಗಮಿಸುತ್ತಿದ್ದಾರೆ. ವಾರಾಂತ್ಯದಲ್ಲಿ ರಾಜಾಸೀಟ್ ಹಾಗೂ ಕುಶಾಲನಗರದ



> ಕೋವಿಡ್‌ನಿಂದಾಗಿ ಕೆಲ ತಿಂಗಳಿನಿಂದ ಪ್ರವಾಸ ಹೋಗಲು ಸಾಧ್ಯವಾಗಿರಲಿಲ್ಲ. ಮುಳ್ಳಯ್ಯನ ಗಿರಿ, ಸೀತಾಳಯ್ಯನಗಿರಿ ಇವೆಲ್ಲವೂ ಬಹಳ ಸುಂದರ ತಾಣಗಳು. ಇಲ್ಲಿನ ತಂಪು ಹವೆ ಅತ್ಯಂತ ಹಿತಕರವಾಗಿದೆ. ಇಲ್ಲಿನ ಪರ್ವತ ಶ್ರೇಣಿ ವಿಶಿಷ್ಟವಾಗಿದೆ.
>
> **–ಅಜಿತ್ ಸಿಂಗ್,** ಪ್ರವಾಸಿ ಬೆಂಗಳೂರು

